S C.R.P.67

| |
|---|
| Form No.4 (Criminal) Deposition Sheets (R.P.No.57) |

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್‌ಃ ೩೪/2025

**ಚಾ.ಸಾ.–15    ಫ್ರಾ.ಸಾ.–09**

| | |
|---|---|
| **ಸಾಕ್ಷಿದಾರರ ಹೆಸರು** | **ಡಾ. ಶೇಕ್ ಮಹಜುದ್ದೀನ್** |
| **ತಂದೆಯ  ಹೆಸರು** | **ಶೇಕ್ ನಾಜಿಮ್‌ಉದ್ದೀನ್** |
| **ವಯಸ್ಸು** | **38 ವರ್ಷಗಳು** |
| **ಉದ್ಯೋಗ** | **ವೈದ್ಯರು , ಸಾರ್ವಜನಿಕ ಆಸ್ಪತ್ರೆ , ಮದ್ದೂರು** |
| **ವಾಸ** | **ಮದ್ದೂರು** |

**ದಿನಾಂಕಃ 06.07.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ  ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ನಾನು ಮದ್ದೂರಿನಲ್ಲಿ ಜೂನ್ 2021 ರಿಂದ ಇಲ್ಲಿವರೆಗೆ ವೈದ್ಯರಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದೇನೆ.

2) ದಿಃ 19.3.2025 ರಂದು ನಂದನಕುಮಾರ್ ಬಿ.ವಿ ಎಂಬುವರು ಆಸ್ಪತ್ರೆಗೆ ಹಲ್ಲೆ ಹಿನ್ನಲೆಯಲ್ಲಿ ಬಂದಿದ್ದರು ಅವರು ಅದೇ ದಿನ 8 ಗಂಟೆ ಸಮಯದಲ್ಲಿ ಮಹೇಶ ಮತ್ತು ಸಚಿನ್ ಎಂಬುವರು ಲಾಂಗ್ ಮತ್ತು ಇತರ ಆಯುಧದಿಂದ ಹಲ್ಲೆ ಮಾಡಿರುವುದಾಗಿ ಹೇಳಿರುತ್ತಾರೆ. ಗೊರವನಹಳ್ಳಿಯ ಮರಿಯಪ್ಪ ಫಾಂ ಬಳಿ ಹಲ್ಲೆಗೊಳಗಾದ ಬಗ್ಗೆ ಹೇಳಿರುತ್ತಾರೆ. ಅವರನ್ನು ಪರೀಕ್ಷಿಸಿದಾಗ ಅವರ ಮೈಮೇಲೆ, ಅವರ ಬಲಗೈನ ಮುಂಭಾಗದಲ್ಲಿ ಇನಸೈಜ್ ವೂಂಡ್ ಕಂಡುಬಂದಿರುತ್ತದೆ. ಅದು 2 * 05 * 05 ಗಾತ್ರವಿರುತ್ತದೆ. ಅದು ಕೆಂಪು ಬಣ್ಣದಾಗಿರುತ್ತದೆ.  ಸದರಿ ಗಾಯ ಸಾದಾ ಸ್ವರೂಪದಾಗಿರುತ್ತದೆ. ಈ ಬಗ್ಗೆ ನಾನು ಗಾಯಪ್ರಮಾಣ ಪತ್ರ ಕೊಟ್ಟಿದ್ದೇನೆ. ಅದನ್ನು ನಿಪಿ 15 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ 15 ಎ ಎಂದು

ಗುರುತಿಸಲಾಯಿತು. ಈ ಬಗ್ಗೆ ನಾನು ಎಂ ಎಲ್ ಸಿ ಅನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಅದನ್ನು ನಿಪಿ 16 ಎಂದು ಸಾಕ್ಷಿ ಸಹಿಯನ್ನು ನಿಪಿ 16 ಎ ಎಂದು ಗುರುತಿಸಲಾಯಿತು.

3) ಅದೇ ದಿನ ಪ್ರಶಾಂತ ಬಿನ್ ಗೋವಿಂದರಾಜು ಎಂಬುವರುಕೂಡ 8 ಗಂಟೆಗೆ ಅದೇಹೊಡೆದಾಟದ ಹಿನ್ನಲೆಯಲ್ಲಿ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿರುತ್ತಾರೆ. ಅವರನ್ನು ನಾನು 9.23 ಕ್ಕೆ ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿವೆ.

1.ಅವರ ತಲೆಯ ಮಧ್ಯಭಾಗದ ಬಲಭಾಗದಲ್ಲಿ ಒಂದು ಕಟ್ ವೂಂಡ್ ಕಂಡುಬಂದಿರುತ್ತದೆ. ಅದು 1 * 1 * 0.5 ಸೆಂ.ಮಿ ಇರುತ್ತದೆ. ಅದು ಕೂಡ ಕೆಂಪು ಬಣ್ಣದಾಗಿರುತ್ತದೆ.

2. ಅವರ ಬಲಮುಂಗೈ ಮೇಲೆ ಇನಸೈಜ್ ಗಾಯ ಕಂಡುಬಂದಿರುತ್ತದೆ. ಅದು 4 * 1 * 0.5 ಸೆಂ.ಮೀ ಗಾತ್ರ ಇರುತ್ತದೆ. ಅದು ಕೂಡ ಕೆಂಪು ಬಣ್ಣದಾಗಿರುತ್ತದೆ.

3. ಅವರ ಬಲಮೊಣಗೈ ಮೇಲೆ 4 * 1*1 ಸೆಂಮೀ ಗಾತರದ ಲಾಸಿರೇಟಡ್ ಗಾಯ ಕಂಡುಬಂದಿರುತ್ತದೆ. ಅದು ಕೂಡ ಕೆಂಪು ಬಣ್ಣದಾಗಿರುತ್ತದೆ. ಈ ಗಾಯಗಳು ಕೂಡ ಸಾದಾ ಸ್ವರೂಪದ ಗಾಯಗಳಾಗಿವೆ. ಈ ಬಗ್ಗೆ ನೀಡಿದ ಗಾಯಪ್ರಮಾಣ ಪತ್ರ ನೋಡುತ್ತಿದ್ದೇನೆ ಅದನ್ನು ನಿಪಿ 17 ಎಂದು ಸಾಕ್ಷಿ ಸಹಿಯನ್ನು ನಿಪಿ 17 ಎ ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಿಸಿದ ಎಂ ಎಲ್ ಸಿ ಅನ್ನು ನಿಪಿ 18 ಎಂದು ಸಾಕ್ಷಿ ಸಹಿಯನ್ನು ನಿಪಿ 18 ಎ ಎಂದು ಗುರುತಿಸಲಾಯಿತು.

4) ತನಿಖಾಧಿಕಾರಿಗಳು ನನ್ನ ಮುಂದೆ ನಂತರದ ಸಮಯದಲ್ಲಿ 5.4.2025 ರಂದು ಮಚ್ಚನ್ನು(ಮ್ಯಾಚೆಟ್) ಹಾಜರುಮಾಡಿರುತ್ತಾರೆ. ಅದನ್ನು ಪರೀಕ್ಷಿಸಿ ನಾನು ನನ್ನ ಅಭಿಪ್ರಾಯ ಕೊಟ್ಟಿದ್ದೇನೆ. ಸದರಿ ಮಚ್ಚನ್ನು ಈಗ ನಾನು ನೋಡುತ್ತಿದ್ದೇನೆ. ಅದು ಮುಮಾ 2 ಎಂದು ಈಗಾಗಲೆ ಗುರುತಿಸಲ್ಪಟ್ಟಿರುತ್ತದೆ. ಮುಮಾ 2 ರಿಂದ ಹಲ್ಲೆ ಮಾಡಿದರೆ ನಿಪಿ 15 , 17 ರ ಗಾಯಪ್ರಮಾಣ ಪತ್ರದಲ್ಲಿ ಹೇಳಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತವೆ. ತನಿಖಾಧಿಕಾರಿಗಳು ನೀಡಿದ ಕೋರಿಕೆ ಪತ್ರವನ್ನು ಈಗ ನೋಡುತ್ತಿದ್ದೇನೆ ನಿಪಿ 19 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ 19 ಎ ಎಂದು ಗುರುತಿಸಲಾಯಿತು. ನಾನು ನೀಡಿದ ವರದಿ ಈಗ ನೋಡುತ್ತಿದ್ದೇನೆ ಅದನ್ನು

ನಿಪಿ 20 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ 20 ಎ ಎಂದು ಗುರುತಿಸಲಾಯಿತು. ನಾನು ಎಂಓ 2 ಆಯುಧವನ್ನು ಸೀಲು ಮಾಡಿ ತನಿಖಾಧಿಕಾರಿಗೆ ವಾಪಾಸು ಕೊಟ್ಟಿದ್ದೇನೆ. ಗಾಯಾಳುವಿಗೆ ಆಗಿದ ಗಾಯಗಳು ತಾಜಾ ಗಾಯಗಳಾಗಿರುತ್ತವೆ.

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಸ್ ಎಂ ಎಸ್ ವಕೀಲರಿಂದಃ</u>**

5) ಗಾಯದ ಪ್ರಮಾಣಪತ್ರಗಳಲ್ಲಿ ನಾನು ಗಾಯಗಳು ತಾಜಾ ಆಗಿದ್ದವು ಎಂದು ಹೇಳಿಲ್ಲ. ಸಾಕ್ಷಿ ಕೆಂಪುಬಣ್ಣದಾಗಿತ್ತು ಎಂದು ಹೇಳಿದ್ದೇನೆ ಎನ್ನುತ್ತಾರೆ. ಅವುಗಳ ವಯಸ್ಸನ್ನು ಉಲ್ಲೇಖ ಮಾಡಿಲ್ಲ ಎಂದರೆ ಸರಿ. ಪೊಲೀಸ್ ಕೋರಿಕೆಯನ್ನು ನಾವು ಇನ್ವರ್ಡ್ ರಿಜಿಸ್ಟರಿಗೆ ಎಂಟ್ರಿ ಮಾಡಿಸಿದ್ದೆವೊ ಇಲ್ಲವೊ ಗೊತ್ತಿಲ್ಲ. ಸಾಕ್ಷಿ ಅದನ್ನು ಆಡಳಿತ ಸಿಬ್ಬಂದಿ ಮಾಡಿರುತ್ತಾರೆ ಎನ್ನುತ್ತಾರೆ. ನಾನು ಅಭಿಪ್ರಾಯ ವರದಿ ಕಳಿಸುವಾಗ ಕೂಡ ಇನ್ವರ್ಡ್ ಔಟ್ ವರ್ಡ್ ಎಂಟ್ರಿ ಮಾಡಿಸಿದ್ದೇನೊ ಇಲ್ಲವೊ ನನಗೆ ಹೇಳಲು ಸಾಧ್ಯವಿಲ್ಲ. ನಾನು ಪೊಲಿಸರ ಕೋರಿಕೆ ಮೇರೆಗೆ ಉತ್ರ್ಪೇಕ್ಷೆ ಮಾಡಿ ಗಾಯದ ಪ್ರಮಾಣ ಪತ್ರ ಮತ್ತು ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಯಾವುದೆ ವ್ಯಕ್ತಿ ಒರಟಾದ ನೆಲದ ಮೇಲೆ ಬಿದ್ದರೆಲ್ಯಾಸಿರೇಟಡ್ ಗಾಯಗಳಾಗುವ ಸಾಧ್ಯತೆ ಇರುತ್ತದೆ. ಅದೇ ರೀತಿ ಒಬ್ಬ ವ್ಯಕ್ತಿ ಚೂಪಾದ ವಸ್ತುವಿನ ಮೇಲೆ ಬಿದ್ದರೆ ಇನ್ ಸೈಜ್ ಗಾಯ ಆಗುವ ಸಾಧ್ಯತೆ ಇರುತ್ತದೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**

5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ